| PUBLICATION NAME : | Vishwavaridhi |
|---|---|
| EDITION : | Bangalore |
| DATE : | 05/09/2023 |
| PAGE : | 8 |

# [illegible]

[illegible]

ENTREPRENEURSHIP DEVELOPMENT INSTITUTE OF INDIA (EDII)

[illegible]

'ಇಡಿಐಐ'ನ ಮಹಾನಿರ್ದೇಶಕ ಡಾ. ಸುನಿಲ್ ಶುಕ್ಲಾ ಅವರ ದೂರದೃಷ್ಟಿಯ ನಾಯಕತ್ವದಲ್ಲಿ, ಸಂಸ್ಥೆಯು ಸಾಟಿಯಿಲ್ಲದ ಯಶಸ್ಸನ್ನು ಸಾಧಿಸಿದೆ. ಉದ್ಯಮಶೀಲತೆಯನ್ನು ಆದ್ಯತೆಯ ವೃತ್ತಿ ಆಯ್ಕೆಯಾಗಿ ನಿರೂಪಿಸಿದೆ. ಜೊತೆಗೆ, ವೈವಿಧ್ಯಮಯ ಉದ್ದೇಶಿತ ಗುಂಪುಗಳ ಸಬಲೀಕರಣವನ್ನು ಸಾಧಿಸಲು ಉದ್ಯಮಶೀಲತೆ ಸಂಬಂಧಿತ ಉಪಕ್ರಮಗಳನ್ನು ಅಳವಡಿಸಿಕೊಳ್ಳುವ ಮತ್ತು ಕಾರ್ಯಗತಗೊಳಿಸುವ ಬಗ್ಗೆ ಕಾರ್ಪೊರೇಟ್‌ಗಳು ಹಾಗೂ ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟಿದೆ, ಆ ಮೂಲಕ ಎಲ್ಲರನ್ನೂ ಒಳಗೊಂಡ ಬೆಳವಣಿಗೆಗೆ ದಾರಿ ಮಾಡಿದೆ.

'ಇಡಿಐಐ'ನ ಹೊಸ ಮೆಗಾ ಕಚೇರಿ ಆಗಸ್ಟ್ 31ರಂದು ಬೆಂಗಳೂರಿನಲ್ಲಿ ಉದ್ಘಾಟನೆಗೊಳ್ಳುತ್ತಿರುವ ಹಿನ್ನೆಲೆಯಲ್ಲಿ, ಇಡೀ ದಕ್ಷಿಣ ಭಾರತಕ್ಕಾಗಿ ಕೈಗೊಂಡ ಕೆಲವು ಮುಂಚೂಣಿ ಚಟುವಟಿಕೆಗಳ ಬಗ್ಗೆ ಒತ್ತಿ ಹೇಳುವುದು ಸರಿಯಷ್ಟೇ.

ಹಲವಾರು ಅಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲಿ ಕಾರ್ಪೊರೇಟ್ ಸಂಸ್ಥೆಗಳೊಂದಿಗೆ 'ಇಡಿಐಐ' ನಂಟು ಹೊಂದಿದ್ದು, ಆ ಮೂಲಕ ಎಲ್ಲರನ್ನೂ ಒಳಗೊಂಡ ಸಮುದಾಯಗಳ ಬೆಳವಣಿಗೆಯನ್ನು ಖಚಿತಪಡಿಸುವಲ್ಲಿ ಯಶಸ್ವಿಯಾಗಿದೆ.

23 ರಾಜ್ಯಗಳನ್ನು ಪ್ರತಿನಿಧಿಸುವ 10,000ಕ್ಕೂ ಹೆಚ್ಚು ಮಹಿಳೆಯರು ಸೇರಿದಂತೆ ಒಟ್ಟು 68,950 ಜನರು; 138 ಜಿಲ್ಲೆಗಳು ಮತ್ತು 741 ಗ್ರಾಮಗಳ ಮೇಲೆ 'ಸಿಎಸ್‌ಆರ್' ಸಹಯೋಗದ ಮೂಲಕ ಪರಿಣಾಮ ಬೀರಲಾಗಿದೆ.

'ಇಡಿಐಐ'ನ ದಕ್ಷಿಣ ಪ್ರಾದೇಶಿಕ ಕಚೇರಿಯು ಪ್ರಮುಖ ಮತ್ತು ಮುಂಚೂಣಿ ಸರ್ಕಾರಿ ಯೋಜನೆಗಳೊಂದಿಗೆ ಸಂಬಂಧ ಹೊಂದಿದೆ, ಇದು ಸುಸ್ಥಿರ ಜೀವನೋಪಾಯದ ಅವಕಾಶಗಳನ್ನು ಸೃಷ್ಟಿಸುವತ್ತ ಗಮನ ಹರಿಸಿದೆ. ಉದಾಹರಣೆಗೆ, ಗ್ರಾಮೀಣಾಭಿವೃದ್ಧಿ ಸಚಿವಾಲಯದ 'ಸ್ಟಾರ್ಟ್ ಅಪ್ ವಿಲೇಜ್ ಎಂಟರ್‌ಪ್ರೈನರ್‌ಶಿಪ್ ಪ್ರೋಗ್ರಾಂ'(ಎಸ್ವಿಇಪಿ) ಅಡಿಯಲ್ಲಿ, ರಾಷ್ಟ್ರೀಯ ಸಂಪನ್ಮೂಲ ಸಂಸ್ಥೆಯಾಗಿರುವ 'ಇಡಿಐಐ', ತರಬೇತಿ ಮತ್ತು ಸಹಾಯಹಸ್ತ ಬೆಂಬಲದ ಮೂಲಕ 15 ರಾಜ್ಯಗಳ 82 ಬ್ಲಾಕ್‌ಗಳಲ್ಲಿ ಗ್ರಾಮೀಣ ಜೀವನೋಪಾಯ ಮತ್ತು ಉದ್ಯೋಗವನ್ನು ಸೃಷ್ಟಿಸುತ್ತಿದೆ. ದಕ್ಷಿಣ ಭಾರತದಲ್ಲಿ, 'ಇಡಿಐಐ' ತೆಲಂಗಾಣದ 3 ಬ್ಲಾಕ್‌ಗಳಲ್ಲಿ ಅಸ್ತಿತ್ವವನ್ನು ಹೊಂದಿದೆ, ಇದು 3906 ಉದ್ಯಮಗಳ ಸ್ಥಾಪನೆಗೆ ಕಾರಣವಾಗಿದೆ.